# ಓ.ಎಸ್ಃ 10-2015

ಪಿ. ಡಬ್ಲ್ಯೂ ಃ 02

**<u>ಸಾಕ್ಷಿಗೆ ದಿನಾಂಕ 05.01.2022 ರಂದು ಪ್ರಮಾಣ ವಚನ ನೀಡಲಾಯಿತು.</u>**

**<u>ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ/ಶ್ರೀಮತಿ ವಕೀಲರಿಂದ</u>**

ನಾನು 10 ನೇ ತರಗತಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಓ ಎಸ್ 122/1986 ಜಾರಿ ಸಂಖೆ 134/1986 ರ ದಾಖಲೆಗಳನ್ನು ನಾನು ನೋಡಿರುತ್ತೇನೆ. ದಿ. 28.11.1988 ರಲ್ಲಿ ಆದ ಕ್ರಯ ಪತ್ರದಲ್ಲಿ ಅದ ದಾಖಲೆಗಳನ್ನು ನಾನು ನೋಡಿರುತ್ತೇನೆ. ಸದರಿ ದಾವೆಗಳನ್ನು ನಾನುಸಲ್ಲಿಸಿರುತ್ತೇನೆ. ಸದರಿ ದಾವೆಯಲ್ಲಿ ಸಲ್ಲಿಸಿದ ದಾಖಲೆಗಳು ನನ್ನ ಬಳಿ ಇಲ್ಲ. ವಾದಿಗೆ ನ್ಯಾ.ದಿಂದ ಅಮೀನರು ದಾವ ಷೆಡ್ಯೂಲ್ ಸ್ವತ್ತಿನ ಸ್ವಾಧೀನತೆಯನ್ನು ನೀಡಿರುತ್ತಾರೆ. ಸ್ವಾಧೀನತೆಯನ್ನು ನೀಡಿದ ದಾಖಲೆಗಳನ್ನು ನಾನು ನೋಡಿರುತ್ತೇನೆ, ಸದರಿ ದಾಖಲೆಗೆ ನಾನು ಸಾಕ್ಷಿಯಾಗಿ ಸಹಿ ಮಾಡಿಲ್ಲ. ಮೃತ 1 ನೇ ವಾದಿ ನನಗೆ ಸಂಬಂಧಿಕರಾಗಬೇಕು ಎಂದರೆ ಸರಿ. ವಾದಿಯರು ನ್ಯಾ.ದಿಂದ ದಾವ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಸ್ವಾಧೀನ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. 1988 ರಿಂದ ಪ್ರತಿವಾದಿಗಳೇ ದಾವ ಷೆಡ್ಯೂಲ್ ಸ್ವತ್ತಿನಲ್ಲಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಮೃತ ಸಿದ್ದಮ್ಮ ರವರು ನನಗೆ ಅಕ್ಕ ಆಗಬೇಕಾಗಿದ್ದರಿಂದ ನ್ಯಾ.ದಿಂದ ಸದರಿ ರವರಿಗೆ ಯಾವುದೇ ಸ್ವಾಧೀನ ನೀಡಿದೆ ಇದ್ದರೂ ಸಹಾ ಅಮೀನರು ಸ್ವಾಧೀನ ನೀಡಿರುತ್ತಾರೆ ಎಂದು ಸುಸುತ ಹೇಳುತ್ತಿದೇನೆ ಎಂದರೆ ಸರಿಯಲ್ಲ. ಈಗಲೂ ಸಹಾ ದಾವ ಷೆಡ್ಯೂಲ್ ಸ್ವತ್ತಿನಲ್ಲಿ ಪ್ರತಿವಾದಿಗಳು ಸ್ವಾದೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

ದಾವ ಷೆಡ್ಯೂಲ್ ಸ್ವತ್ತಿನ ಕಂದಾಯ ದಾಖಲೆಗಳು ಮೃತ ಸಿದ್ದಮ್ಮ ರವರ ಹೆಸರಿನಲ್ಲಿದೆ. ಯಾವ ದಿನಾಂಕದಂದು ಸಿದ್ದಮ್ಮ ರವರಿಗೆ ಖಾತೆ ಬದಲಾವಣೆ

ಆಗಿದೆ ಎಂದು ನನಗೆ ಗೊತ್ತಿಲ್ಲ. ನ್ಯಾ.ದ ಆದೇಶದಂತೆ ಸಿದ್ದಮ್ಮ ರವರ ಹೆಸರಿಗೆ ಖಾತೆ ಬದಲಾವಣೆ ಆಗಿರುತ್ತದೆ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಶ್ರೀರಂಗಪಟ್ಟಣ